## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-06**
**C.W.-05**

| | | |
|---|---|---|
| ಹೆಸರು | : | ಕಲೀಂ ಉಲ್ಲಾ ಖಾನ್ |
| ತಂದೆಯ ಹೆಸರು | : | ನಸ್ರುಲ್ಲಾ ಖಾನ್ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಕಬಾಬ್ ಅಂಗಡಿ |
| ವಾಸಸ್ಥಳ | : | ಕೆಸರೇ, ಮೈಸೂರು |

**ದಿನಾಂಕಃ 26.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

2018 ರಿಂದ 2021ರವರೆಗೆ ನಾನು ಮೈಸೂರಿನ ಕುರಿಮಂಡಿಯ ಎ-ಬ್ಲಾಕಿನಲ್ಲಿ ಕುಪ್ಪಮ್ಮ ಎನ್ನುವವರ ಮನೆಯಲ್ಲಿ ಬಾಡಿಗೆಗೆ ವಾಸ ಮಾಡುತ್ತಿದ್ದೆ. ಚಾಸಾ-4 ದಾಸ ನನ್ನ ಎದುರಮನೆಯಲ್ಲಿದ್ದರು. ರವಿ ಅಲಿಯಾಸ್ ಬಚ್ಚ ನನ್ನು ನಾನು ನೋಡಿದ್ದೆ. ಆತ ದಾಸರವರ ಮನೆಯ ಮೇಲ್ಭಾಗದ ಮೊದಲ ಮಹಡಿಯಲ್ಲಿ ವಾಸ ಮಾಡುತ್ತಿದ್ದ. ಆತ ಟಾರ್ ಹಾಕುವ ಕೆಲಸವನ್ನು ಚಾಸಾ-1ರವರೊಂದಿಗೆ ಮಾಡುತ್ತಿದ್ದ. 1985ರಿಂದ ನನಗೆ ಚಾಸಾ-1ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿತರನ್ನು ನೋಡಿರುತ್ತೇನೆ. ಆದರೆ ಅವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ.

2. ಕೆಸರೆಯುಲ್ಲಿ ನಾನು ಕಬಾಬ್ ಅಂಗಡಿಯನ್ನು ಇಟ್ಟುಕೊಂಡು ನಡೆಸುತ್ತಿದ್ದೇನೆ, ರಾತ್ರಿ 7.00 ಗಂಟೆಗೆ ಅಂಗಡಿಯನ್ನು ತೆರೆದು 12.00 - 12.30ರ ಸಮಯಕ್ಕೆ ಮುಚ್ಚುತ್ತೇನೆ. ಕಳೆದ 15 ವರ್ಷಗಳಿಂದ ಈ ವ್ಯಾಪಾರ ಮಾಡುತ್ತಿದ್ದೇನೆ.

3. ರವಿ ಅಲಿಯಾಸ್ ಬಚ್ಚಾ ಈಗ ಮೃತ ಪಟ್ಟಿರುತ್ತಾನೆ.

4. ದಿಃ14.12.2020ರಂದು ನಾನು ರಾತ್ರಿ 12.30ಕ್ಕೆ ನಮ್ಮ ಮನೆಯ ಹತ್ತಿರ ಬಂದೆ. ನಮ್ಮ ಮನೆಯ ಪಕ್ಕದಲ್ಲಿ ಒಂದು ಲೈಟ್ ಕಂಬ ಇತ್ತು. ನಾನು ಬೇಗನೇ ನಮ್ಮ ಮನೆಯ ಬಾಗಿಲಿಗೆ ಬಂದು ತಿರುಗಿ ನೋಡಿದೆ. ಆಗ ಈ ಮೂರು ಜನರು ಒಂದು Two Wheeler ನಲ್ಲಿ ಬಂದು,

ಗಾಡಿಯನ್ನು ನಿಲ್ಲಿಸಿ, ಚಾಸಾ–4 ರವರ ಮನೆಯ ಮೇಲ್ಭಾಗಕ್ಕೆ ಅಂದರೆ ಮೊದಲನೆ ಮಹಡಿಗೆ ಹೋಗುತ್ತಿದ್ದರು. ಒಬ್ಬನ ಕೈಯಲ್ಲಿ ಪ್ಲಾಸ್ಟಿಕ್ ಕವರ್ ಇತ್ತು. ಈಗ ನ್ಯಾಯಾಲಯದ ಮುಂದಿರುವ ಈ ಇಬ್ಬರು ಆರೋಪಿತರೊಂದಿಗೆ ಇನ್ನೊಬ್ಬ ಹುಡುಗ ಇದ್ದ. ಆ ಇನ್ನೊಬ್ಬ ಹುಡುಗನನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಪರ ವಕೀಲರು 3 ನೇ ಆರೋಪಿಯ ಗುರುತಿಸುವಿಕೆಯ ಬಾಬ್ತು ತಕರಾರು ಇರುವುದಿಲ್ಲ ಎಂದಿರುತ್ತಾರೆ.)ನಾನು ಮನೆಯ ಒಳಗಡೆ ಹೋದೆ. ಮರುದಿನ ಬೆಳಿಗ್ಗೆ ಸುಮಾರು 9.30 ರ ಸಮಯಕ್ಕೆ ನನ್ನ ಹೆಂಡತಿ ನನ್ನನ್ನು ಏಳಿಸಿ, ಎದುರುಗಡೆ ಮನೆಯಲ್ಲಿ ರವಿಯ ಕೊಲೆಯಾಗಿದೆ ಎಂದು ಹೇಳಿದಳು. ಆಗ ನಾನು ಮನೆಯ ಹೊರಗಡೆ ಬಂದೆ. ಜನರು ತುಂಬಿದ್ದರು. ನಾನು ಶವವನ್ನು ನೋಡಲಿಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿರುತ್ತಾರೆ. ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಿಂದಃ–**

5. ನಾನು ಮೈಸೂರಿಗೆ 1972 ರಲ್ಲಿ ಬಂದಿರುತ್ತೇನೆ. 2018 ರಿಂದ 3 ವರ್ಷಗಳ ಕಾಲ ಕುರಿಮಂಡಿಯಲ್ಲಿದ್ದೆ. ನಾನು ನನ್ನ 2 ನೇ ಹೆಂಡತಿಯೊಂದಿಗೆ ಆ ಮನೆಗೆ ವಾಸ ಮಾಡಲು ಬಾಡಿಗೆಗೆ ಬಂದಿದ್ದೆ. ಚಾಸಾ–4 ರವರು ರಸ್ತೆ ಕೆಲಸವನ್ನು ಮಾಡಿಸುತ್ತಿದ್ದರು. ಅವರೊಂದಿಗೆ ಯಾರು ಯಾರು ಕೆಲಸ ಮಾಡುತ್ತಿದ್ದರು ಅವರು ಎಲ್ಲಿ ಕೆಲಸ ಮಾಡಿಸುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ–4 ರವರ ಮನೆಯ ಸುತ್ತಮುತ್ತ ಯಾರು ವಾಸ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತು. ನನ್ನದು ಕಬಾಬ್ ಅಂಗಡಿ, ಅಲ್ಲಿ ನಾನೊಬ್ಬನೇ ಕೆಲಸ ಮಾಡುತ್ತಿದ್ದೆ. ನನ್ನ ಅಂಗಡಿಯ ಹೆಸರು 'ಮಾಶಾ ಅಲ್ಲಾ ಹಜರತ್ ನಿಜಾಮುದ್ದೀನ್ ಹೋಟೆಲ್' ಎಂದು. ನನ್ನ ಅಂಗಡಿಗೆ ಬಂದು ಹೋಗುವವರ ಪ್ರತಿಯೊಬ್ಬರ ಮಾಹಿತಿಯು ನನಗೆ ಇರುತ್ತದೆ. 2018 ರಿಂದ ನನಗೆ ರವಿಯ ಪರಿಚಯವಿತ್ತು. ಆತ ನಮ್ಮ ಎದುರು ಮನೆಯವನು.

6. ನನ್ನ ವಾಹನ ಜುಪಿಟರ್. ನನ್ನ ಅಂಗಡಿಯನ್ನು ರಾತ್ರಿ 12.15 ಕ್ಕೆ ಮುಚ್ಚಿದ್ದೆ. ನನ್ನ ಮನೆ ನೆಲಮಹಡಿಯಲ್ಲಿತ್ತು. ರವಿಯ ಮನೆ ನನ್ನ ಮನೆಯ ಎದುರಿನಲ್ಲಿ, ಮೊದಲನೇ ಮಹಡಿಯಲ್ಲಿತ್ತು. ರವಿಯ ಮನೆಗೆ ಯಾರು ಯಾರು ಬಂದು ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆತ ಎಲ್ಲರ ಜೊತೆಯಲ್ಲಿಯೂ ಸಹ ಹೇಗಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನನಗೆ ಸಿಕ್ಕಿದಾಗ ಆತ ಅಣ್ಣ

ಹೇಗಿದ್ದೀರಿ ಎಂದು ಮಾತನಾಡಿಸುತ್ತಿದ್ದ. ಆತ ಒಬ್ಬನೇ ವಾಸ ಮಾಡುತ್ತಿದ್ದ. ಆತನ ಮನೆಗೆ ನಾನು ಎಂದಿಗೂ ಹೋಗಿರಲಿಲ್ಲ. ನಾನು ಆ ದಿನ ರಾತ್ರಿ 12.30 ಕ್ಕೆ ನಮ್ಮ ಮನೆಯ ಹತ್ತಿರಕ್ಕೆ ಹೋದಾಗ ಅಲ್ಲಿ ಯಾರೂ ವಾಕ್ ಮಾಡುತ್ತಿರಲಿಲ್ಲ. ರವಿಯ ಮನೆಯ ಬಾಗಿಲು ಮುಚ್ಚಿತ್ತು. ಲೈಟ್ ಉರಿಯುತ್ತಿರಲಿಲ್ಲ. ಆತ ರಾತ್ರಿ 12.30 ಕ್ಕೆ ಯಾವತ್ತಾದರೂ ಎಚ್ಚರವಿರುತ್ತಿದ್ದನೋ, ಇಲ್ಲವೋ, ನನಗೆ ಗೊತ್ತಿಲ್ಲ. ಅಲ್ಲಿದ್ದ ಲೈಟ್ ಕಂಬದಲ್ಲಿದ್ದಂತಹ ದೀಪ ರವಿಯ ಮನೆಯ ಕಡೆಗೆ ಇತ್ತು. ಆ ಲೈಟ್ ಕಂಬದ ಹತ್ತಿರ ದೆವ್ವದ ಕಾಟ ಇರುತ್ತದೆ ಎಂದು ಹೇಳುತ್ತಿದುದ್ದರಿಂದ ನಾನು ಬೇಗನೇ ಮನೆಯ ಹತ್ತಿರಕ್ಕೆ ಹೋದೆ, ನನ್ನ ಹೆಂಡತಿ ಬಾಗಿಲು ತೆರೆದಳು, ಆಗ ನಾನು ತಿರುಗಿ ನೋಡಿದಾಗ ಈ ಮೂವರು ಹುಡುಗರು ರವಿಯ ಮನೆಗೆ ಹೋಗುತ್ತಿದ್ದರು. ನಾನು ನನ್ನ ವಾಹನವನ್ನು ನಿಲ್ಲಿಸಿದ ನಂತರ, ಬಂದಂತಹ ಇನ್ನೊಂದು ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಚಾಸಾ-4 ರವರ ಮನೆಯ ಪಕ್ಕದಲ್ಲಿ ಆಯುಷಾ ಎನ್ನುವವರ ಮನೆಯಿದೆ. ಆ ಮನೆಯ ಎದುರುಗಡೆ, ಆ ವಾಹನವನ್ನು ನಿಲ್ಲಿಸಿದರು. ರವಿ ವಾಸ ಮಾಡುತ್ತಿದ್ದ, ಅಕ್ಕಪಕ್ಕದ ಮನೆಗಳಲ್ಲಿ ಜನರು ವಾಸ ಮಾಡುತ್ತಿದ್ದರು.

7. ನಾನು ಯಾವಾಗಲೂ ರಾತ್ರಿ 12.30 ಗೆ ಮನೆಗೆ ಬರುವುದರಿಂದ, ರವಿ ಎಷ್ಟು ಹೊತ್ತಿಗೆ ಮನೆಗೆ ಬರುತ್ತಿದ್ದ, ಬೆಳಿಗ್ಗೆ ಹೋಗುತ್ತಿದ್ದ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎನ್ನುವುದು ಸರಿ. ರವಿಯ ಸ್ನೇಹಿತರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

8. ನಾನು ಮನೆಯ ಒಳಗೆ ಹೋದ ನಂತರ ಪುನಃ ಬಾಗಿಲು ತೆಗೆದು, ರವಿಯ ಮನೆಯಲ್ಲಿ ಲೈಟ್ ಉರಿಯುತ್ತಿದೆಯೋ ಇಲ್ಲವೋ ಎನ್ನುವುದನ್ನು ನಾನು ನೋಡಲಿಲ್ಲ. ನಮ್ಮ ಮನೆಯ ನಂತರ ಮಧ್ಯದಲ್ಲಿ 30 ಅಡಿಯ ರಸ್ತೆಯಿದೆ, ನಂತರ ರವಿಯ ಮನೆ ಇದೆ. ಆ ಮೂವರು ಹುಡುಗರಲ್ಲಿ ಒಬ್ಬನ ಕೈಯಲ್ಲಿ ಪ್ಲಾಸ್ಟಿಕ್ ಚೀಲ ಇತ್ತು, ಆತ ಯಾರೆಂದು ನನಗೆ ಗೊತ್ತಿಲ್ಲ. ಆ ಗಾಡಿ ನಿಂತಾಗ, ಯಾರು ನೀವು ಎಂದು ನಾನು ವಿಚಾರಿಸಿರುವುದಿಲ್ಲ. ಆ ಪ್ಲಾಸ್ಟಿಕ್ ಚೀಲದಲ್ಲಿ ಏನಿತ್ತು ಎಂದು ನನಗೆ ಗೊತ್ತಿಲ್ಲ. ಆ ಮೂವರು ಹುಡುಗರು ರವಿಯ ಮನೆಗೆ ಹೋಗುವ ಮುನ್ನ ಬೇರೆ ಯಾರಾದರೂ ಹೋಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮನೆಯ ಒಳಗೆ ಹೋದ ನಂತರ ನನಗೆ ಯಾವುದೇ ಗಲಾಟೆಯ ಶಬ್ದ ಕೇಳಿರುವುದಿಲ್ಲ. ನನ್ನ ಹೆಂಡತಿ ಮರುದಿನ ಬೆಳಿಗ್ಗೆ ಎದುರುಮನೆಯಲ್ಲಿ

ಕೊಲೆಯಾಗಿರುತ್ತದೆ ಎಂದು ನನ್ನಲ್ಲಿ ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಹಿಂದಿನ ದಿನ ರಾತ್ರಿ ರವಿಯ ಮನೆಗೆ ಯಾರೂ ಹೋದದನ್ನೂ ನಾನು ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ.

9. ಪೊಲೀಸರಿಗೆ 15 ನೇ ತಾರೀಖಿನಂದು ಹೇಳಿಕೆ ಕೊಟ್ಟಿರುತ್ತೇನೆ. ಮೂರು ಜನ ಬಂದು ಮೇಲಿನ ಮನೆಗೆ ಹೋದರು ಎಂದು ಹೇಳಿರುತ್ತೇನೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ, ಹಿಂದಿನ ದಿನ ರಾತ್ರಿ ಈ ಮೂವರು ರವಿಯ ಮನೆಗೆ ಹೋದರು, ಎಂದು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ರಾತ್ರಿ ನಾನು ಈ ಮೂವರನ್ನು ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ-**

10. ನಾನು ಮತ್ತು ರವಿ ಮತ್ತು ಇತರರು ವಾಸವಿದ್ದ ಮನೆಗಳನ್ನು ಸರ್ಕಾರ ಬಡವರಿಗೆ ಕಟ್ಟಿಸಿಕೊಟ್ಟಂತಹ ಮನೆಗಳಾಗಿದ್ದವು ಎನ್ನುವುದು ಸರಿ. ನಾನು ಆ ಮನೆಯಲ್ಲಿ ಬಾಡಿಗೆಗೆ ವಾಸವಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

11. ನಾನು ಮಧ್ಯಾಹ್ನ 3.00 ಗಂಟೆಯ ಸಮಯಕ್ಕೆ ಪೊ.ಠಾಣೆಗೆ ನನ್ನ ಹೇಳಿಕೆ ಕೊಟ್ಟಿದ್ದೆ. ನನಗೆ ಪೊಲೀಸರು ಹೇಳಿಕೆ ನೀಡಬೇಕೆಂದು ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ನಾನು ಹೇಳಿಕೆ ಕೊಡಲು ಪೊ.ಠಾಣೆಗೆ ಹೋದಾಗ ನನ್ನ ಜೊತೆ ಚಾಸಾ-3 ಮತ್ತು 4 ಬಂದಿದ್ದರು. ಚಾಸಾ-1 ನನಗೆ ಬಹಳ ಪರಿಚಯಸ್ಥರು ಎನ್ನುವುದು ಸರಿ. ಚಾಸಾ-4 ರವರು ಫೋನು ಮಾಡಿ ತಿಳಿಸಿದ್ದರು. ಆದ್ದರಿಂದ ಪೊ.ಠಾಣೆಗೆ ಹೋಗಿದ್ದೆ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲದಿದ್ದರೂ ಸಹ ಚಾಸಾ-4 ರವರು ಹೇಳಿದ್ದರಿಂದ ಪೊ.ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ರವಿಯ ವೈಯುಕ್ತಿಕ ವಿಷಯ ನನಗೆ ಗೊತ್ತಿರುವುದಿಲ್ಲ. ಆ ದಿನ ರಾತ್ರಿ ಬಂದ ಮೂರು ಜನ ಹುಡುಗರ ಪರಿಚಯ ನನಗೆ ಇತ್ತು, ಆದರೆ ಅವರ ಹೆಸರುಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ, ವಿನಯ್, ನಿಖಿಲ್ ಪ್ರಸಾದ್, ಅಪ್ಪು,ರವರುಗಳು ರವಿಯ ಮನೆಗೆ ಹೋದರು ಎಂದು ಹೇಳಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಬಾಬುರವರ ಮಗ ಎಂದಿದ್ದೆ ಎಂದು. ನಾನು ಆ ರಾತಿ 12.30 ಕ್ಕೆ ಮನೆಗೆ ಬಂದಾಗ ಚಾಸಾ-4 ರವರನ್ನು ನೋಡಿ, ಮಾತನಾಡಿಸಿರುವುದಿಲ್ಲ. ಪೊಲೀಸರ ಮುಂದೆ ನಾನು ಆ ಮೂವರು ಹುಡುಗರು ಒಂದು ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ಹೋದರು ಎಂದು ಹೇಳಿರುತ್ತೇನೆ. ನಾನು ಆ

ಬಡಾವಣೆಯಲ್ಲಿ ವಾಸ ಮಾಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಚಾಸಾ-1ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. 2 ನೇ ಆರೋಪಿ ನಿಖಿಲ್ ಪ್ರಸಾದ್ ರವರಿಗೆ ನಾಯಿ ಕಚ್ಚಿದ್ದರಿಂದ ಆತ ಮನೆಯಲ್ಲಿದ್ದ ಎಂದು ಮಾಡಿದ ಸಲಹೆಗೆ ಸಾಕ್ಷಿ, ನ್ಯಾಯಾಲಯದ ಮುಂದಿರುವ ಈ ಇಬ್ಬರು ಹುಡುಗರು ಮತ್ತು ಇನ್ನೊಬ್ಬ ಹುಡುಗ ಹೋದ ಎನ್ನುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.